# ಹಡಗಿನ ಹದೀಸ್‌ನಲ್ಲಿರುವ ಅಮೂಲ್ಯ ಪ್ರಯೋಜನಗಳು

[ الفوائد الثمينة من حديث السفينة ]

[Kannada – ಕನ್ನಡ – كنادي ]


ಅಲ್‌ಅಲ್ಲಾಮತೈನ್ ಇಬ್ನ್ ಬಾಝ್ ಮತ್ತು ಅಲ್‌ಅಲ್ಬಾನೀ (ﷺ)

العلامتين ابن باز والألباني رحمهما الله تعالى

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ترجمة: محمد حمزة بتوري



IslamHouse.com

1435 – 2014

بِسْمِ اللهِ الرَّحْمَـنِ الرَّحِيم

ಅನ್ನುಅ್‌ಮಾನ್ ಇಬ್ನ್ ಬಶೀರ್(ﷺ)ರಿಂದ ವರದಿಯಾದ ಒಂದು ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳಿದರು:

« مَثَلُ الْقَائِمِ فِي حُدُودِ اللَّهِ وَالْوَاقِعِ فِيهَا كَمَثَلِ قَوْمٍ اسْتَهَمُوا عَلَى سَفِينَةٍ فَصَارَ بَعْضُهُمْ أَعْلَاهَا وَبَعْضُهُمْ أَسْفَلَهَا، وَكَانَ الَّذِينَ فِي أَسْفَلِهَا إِذَا اسْتَقَوْا مِنَ الْمَاءِ مَرُّوا عَلَى مَنْ فَوْقَهُمْ، فَقَالُوا: لَوْ أَنَّا خَرَقْنَا فِي نَصِيبِنَا خَرْقًا وَلَمْ نُؤْذِ مَنْ فَوْقَنَا، فَإِنْ يَتْرُكُوهُمْ وَمَا أَرَادُوا هَلَكُوا جَمِيعًا وَإِنْ أَخَذُوا عَلَى أَيْدِيهِمْ نَجَوْا وَنَجَوْا جَمِيعًا»

**“ಅಲ್ಲಾಹನ ಸರಹದ್ದುಗಳ (ನಿಷಿದ್ಧಗಳ) ಬಳಿ ನಿಂತುಬಿಡುವವನು ಮತ್ತು ಅದರಲ್ಲಿ ಬಿದ್ದುಬಿಡುವವನ ಉದಾಹರಣೆಯು ಒಂದು ಹಡಗಿನಲ್ಲಿ ಪ್ರಯಾಣ ಮಾಡಲು ಚೀಟಿಯೆತ್ತಿದ ಜನರಂತೆಯಾಗಿದೆ. ಹೀಗೆ ಅವರಲ್ಲಿ ಕೆಲವರು ಹಡಗಿನ ಮೇಲ್ಭಾಗದಲ್ಲೂ ಇನ್ನು ಕೆಲವರು ಕೆಳಭಾಗದಲ್ಲೂ ಸ್ಥಾನವನ್ನು ಪಡೆದರು. ಕೆಳಭಾಗದಲ್ಲಿರುವವರಿಗೆ ನೀರಿನ ಅಗತ್ಯವುಂಟಾದರೆ ಅವರು ಮೇಲ್ಭಾಗಕ್ಕೆ ಬಂದು ಅದನ್ನು ಪಡೆಯಬೇಕಾಗಿತ್ತು. ಆದ್ದರಿಂದ ಅವರು ಹೇಳಿದರು: ‘ನಾವು ನಮ್ಮ ಈ ಭಾಗದಲ್ಲೇ ಒಂದು ತೂತನ್ನು ಕೊರೆದರೆ ನಮಗೆ ಮೇಲ್ಭಾಗದಲ್ಲಿರುವವರಿಗೆ ತೊಂದರೆ ಕೊಡುವುದು ತಪ್ಪುತ್ತದೆ.’ ಅವರ ಉದ್ದೇಶಿಸಿದ್ದನ್ನು ಮಾಡಿಕೊಳ್ಳುವಂತೆ ಅವರನ್ನು ಹಾಗೆಯೇ ಬಿಟ್ಟರೆ ಎಲ್ಲರೂ ನಾಶವಾಗುವರು. ಆದರೆ ಅವರ ಕೈ ಹಿಡಿದು (ಹಾಗೆ ಮಾಡದಂತೆ) ತಡೆದರೆ ಅವರೂ ಪಾರಾಗುವರು ಮತ್ತು ಎಲ್ಲರೂ ಪಾರಾಗುವರು.” [ಅಲ್‌ಬುಖಾರಿ]**

ಇನ್ನೊಂದು ವರದಿಯಲ್ಲಿ ಹೀಗಿದೆ:

« مَثَلُ الْمُدْهِنِ فِي حُدُودِ اللَّهِ وَالْوَاقِعِ فِيهَا مَثَلُ قَوْمٍ اسْتَهَمُوا سَفِينَةً فَصَارَ بَعْضُهُمْ فِي أَسْفَلِهَا وَصَارَ بَعْضُهُمْ فِي أَعْلَاهَا فَكَانَ الَّذِي فِي أَسْفَلِهَا يَمُرُّ بِالْمَاءِ عَلَى الَّذِينَ فِي أَعْلَاهَا فَتَأَذَّوْا بِهِ فَأَخَذَ فَأْسًا فَجَعَلَ يَنْقُرُ أَسْفَلَ السَّفِينَةِ فَأَتَوْهُ فَقَالُوا: مَا لَكَ قَالَ: تَأَذَّيْتُمْ بِي وَلَا

بُدَّ لِي مِنْ الْمَاءِ فَإِنْ أَخَذُوا عَلَى يَدَيْهِ أَنْجَوْهُ وَنَجَّوْا أَنْفُسَهُمْ وَإِنْ تَرَكُوهُ أَهْلَكُوهُ وَأَهْلَكُوا أَنْفُسَهُمْ »

**“ಅಲ್ಲಾಹನ ಸರಹದ್ದುಗಳ ಬಗ್ಗೆ ‘ಇದ್‌ಹಾನ್’ ಮಾಡುವವನು (ಅಂದರೆ ಜನರು ದುರಾಚಾರ ಮಾಡುವಾಗ ಅದನ್ನು ನಿಂತು ನೋಡುವವನು ಮತ್ತು ಅದನ್ನು ವಿರೋಧಿಸದವನು) ಮತ್ತು ಅದರಲ್ಲಿ ಬಿದ್ದುಬಿಡುವವನ ಉದಾಹರಣೆಯು ಒಂದು ಹಡಗಿನಲ್ಲಿ ಪ್ರಯಾಣ ಮಾಡಲು ಚೀಟಿಯೆತ್ತಿದ ಜನರಂತೆಯಾಗಿದೆ. ಹೀಗೆ ಅವರಲ್ಲಿ ಕೆಲವರು ಹಡಗಿನ ಕೆಳಭಾಗದಲ್ಲೂ ಇನ್ನು ಕೆಲವರು ಹಡಗಿನ ಮೇಲ್ಭಾಗದಲ್ಲೂ ಸ್ಥಾನವನ್ನು ಪಡೆದರು. ಕೆಳಭಾಗದಲ್ಲಿರುವವರಿಗೆ ನೀರು ಬೇಕಾದರೆ ಅವನು ಮೇಲ್ಭಾಗಕ್ಕೆ ಬರಬೇಕಾಗಿತ್ತು. ಇದರಿಂದ ಮೇಲ್ಭಾಗದಲ್ಲಿರುವವರಿಗೆ ತೊಂದರೆಯಾಗುತ್ತಿತ್ತು. ಆದ್ದರಿಂದ ಕೆಳಭಾಗದಲ್ಲಿರುವ ಒಬ್ಬನು ಒಂದು ಕೊಡಲಿಯನ್ನು ಹಿಡಿದು ಹಡಗಿನ ಕೆಳಭಾಗವನ್ನು ಕಡಿಯತೊಡಗಿದನು. ಆಗ ಅವರು ಅವನ ಬಳಿ ಬಂದು ‘ನೀನೇಕೆ ಹೀಗೆ ಮಾಡುತ್ತಿರುವೆ?’ ಎಂದು ಕೇಳಿದಾಗ ಅವನು ಹೇಳಿದನು: ‘ನನ್ನಿಂದಾಗಿ ನೀವು ತೊಂದರೆ ಅನುಭವಿಸುತ್ತಿದ್ದೀರಿ. ಆದರೆ ನನಗೆ ನೀರಿನ ವಿಪರೀತ ಅಗತ್ಯವಿದೆ.’ ಆಗ ಅವರು ಅವನ ಕೈಯನ್ನು ಹಿಡಿದು ತಡೆದರೆ ಅವರು ಅವನನ್ನು ಪಾರು ಮಾಡುವರು ಮತ್ತು ಅವರೂ ಸ್ವತಃ ಪಾರಾಗುವರು. ಅವರು ಅವನನ್ನು ಹಾಗೆಯೇ ಬಿಟ್ಟರೆ ಅವರು ಅವನನ್ನು ನಾಶ ಮಾಡುವರು ಮತ್ತು ಸ್ವತಃ ತಾವೂ ನಾಶವಾಗುವರು.”**

## ಹದೀಸಿನ ಅರ್ಥ

ಒಂದು ಸಮಾಜದಲ್ಲಿರುವ ಜನರನ್ನು ಪ್ರವಾದಿ(ﷺ)ರವರು ಇಲ್ಲಿ ಹಡಗಿನಲ್ಲಿ ಪ್ರಯಾಣ ಮಾಡಿದ ಜನರಿಗೆ ಹೋಲಿಸುತ್ತಿದ್ದಾರೆ. ತಮಗೆ ಸಿಕ್ಕ ಪಾಲಿನ ಪ್ರಕಾರ ಅವರಲ್ಲಿ ಕೆಲವರು ಮೇಲ್ಭಾಗದಲ್ಲೂ ಕೆಲವರು ಕೆಳಭಾಗದಲ್ಲೂ ಸ್ಥಾನವನ್ನು ಪಡೆದರು. ಇಲ್ಲಿ ಹಡಗು ಎಂದರೆ ಒಂದು ಸಮಾಜ, ಅಥವಾ ಗ್ರಾಮ ಅಥವಾ ಪಟ್ಟಣವಾಗಿದೆ.

ಅಲ್ಲಾಹನ ವಿರೋಧ ಮತ್ತು ನಿಷೇಧಗಳೊಂದಿಗೆ ಜನರು ಹೇಗೆ ವರ್ತಿಸುತ್ತಾರೆ ಎಂಬುದನ್ನು ಈ ಹದೀಸಿನಲ್ಲಿ ವಿವರಿಸಲಾಗಿದೆ. ಇಲ್ಲಿ ಜನರನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಒಂದು ಗುಂಪು ಅಲ್ಲಾಹನ ವಿರೋಧ ಮತ್ತು ನಿಷೇಧಗಳನ್ನು ಕಾಣುವಾಗ ಅಲ್ಲೇ ನಿಂತುಬಿಡುವರು ಮತ್ತು ಅದನ್ನು ಪ್ರವೇಶಿಸಿದ ಜನರನ್ನು ಅದರಿಂದ ಹೊರತರಲು ಮತ್ತು ಅಲ್ಲಾಹು ವಿರೋಧಿಸಿದ ಹಾಗೂ ನಿಷಿದ್ಧಗೊಳಿಸಿದ ವಿಷಯಗಳನ್ನು ನಿರ್ಮೂಲನಗೊಳಿಸಲು ಪ್ರಯತ್ನಿಸುವರು.

ಇನ್ನೊಂದು ಗುಂಪಿನವರು ಆ ವಿರೋಧ ಮತ್ತು ನಿಷೇಧಗಳಲ್ಲಿ ಪ್ರವೇಶಿಸಿ ಅದರಲ್ಲೇ ಮಗ್ನರಾಗುವವರು. ಅಥವಾ ಆ ವಿರೋಧ ಮತ್ತು ನಿಷೇಧಗಳನ್ನು ಪ್ರವೇಶಿಸದಿದ್ದರೂ ಅದರಲ್ಲಿ ಪ್ರವೇಶಿಸಿದ ಜನರಿಗೆ ಹಿತೋಪದೇಶವನ್ನಾಗಲಿ, ಎಚ್ಚರಿಕೆಯನ್ನಾಗಲಿ ನೀಡದವರು. ಅಂದರೆ ಸದಾಚಾರವನ್ನು ಆದೇಶಿಸದ ಮತ್ತು ದುರಾಚಾರವನ್ನು ವಿರೋಧಿಸದ ಜನರು.

ಆ ಹಡಗು ಸುರಕ್ಷಿತವಾಗಿ ದಡವನ್ನು ಸೇರಬೇಕಾದರೆ ಆ ಹಡಗಿಗೆ ತೂತು ಕೊರೆಯುವವನನ್ನು ಅಥವಾ ಆ ಹಡಗಿಗೆ ಹಾನಿ ಮಾಡುವವನನ್ನು ತಡೆಯಲೇ ಬೇಕಾಗಿದೆ. ಇದೇ ರೀತಿ ಒಂದು ಸಮಾಜವು ಸುರಕ್ಷಿತವಾಗಿರಬೇಕಾದರೆ, ಅದು ಅಭಿವೃದ್ಧಿ ಹೊಂದಬೇಕಾದರೆ ಆ ಸಮಾಜವನ್ನು ಕಿಡಿಗೇಡಿಗಳ ಕೈಯಿಂದ ಕಾಪಾಡಿಕೊಳ್ಳುವುದು ಮತ್ತು ಅವರನ್ನು ಅವರ ಕೃತ್ಯಗಳಿಂದ ತಡೆಯುವುದು ಅತ್ಯಾವಶ್ಯಕವಾಗಿದೆ.

## ಹದೀಸಿನ ಪ್ರಯೋಜನಗಳು

ವಾಸ್ತವ ಸ್ಥಿತಿಗಳೊಂದಿಗೆ ಜೋಡಿಸಿಕೊಂಡು ಜನರಿಗೆ ಅರ್ಥವಾಗುವ ರೀತಿಯಲ್ಲಿ ಉದಾಹರಣೆಗಳನ್ನು ಕೊಡುತ್ತಾ ವಿಷಯವನ್ನು ಜನರಿಗೆ ಮನದಟ್ಟು ಮಾಡಿಸುವ ಪ್ರವಾದಿ(ﷺ)ರವರ ಬೋಧನಾ ಶೈಲಿಯು ಅದ್ಭುತವಾಗಿದೆ. ಉದಾಹರಣೆ ಕೊಡುವುದರಿಂದ ವಿಷಯಗಳು ಬಹುಬೇಗ ಅರ್ಥವಾಗುತ್ತವೆ. ಇದು ಕುರ್‌ಆನ್‌ನ ಶೈಲಿಯೂ ಆಗಿದೆ. ಕುರ್‌ಆನ್ ಹೇಳುವುದನ್ನು ನೋಡಿರಿ:

﴿ مَثَلُهُمْ كَمَثَلِ الَّذِي اسْتَوْقَدَ نَارًا فَلَمَّا أَضَاءَتْ مَا حَوْلَهُ ذَهَبَ اللَّهُ بِنُورِهِمْ وَتَرَكَهُمْ فِي ظُلُمَاتٍ لَا يُبْصِرُونَ ﴾

**“ಅವರ ಉದಾಹರಣೆಯು ಬೆಂಕಿಯನ್ನು ಉರಿಸಿದ ಒಬ್ಬ ವ್ಯಕ್ತಿಯ ಉದಾಹರಣೆಯಂತಾಗಿದೆ. ಅದು ಆತನ ಸುತ್ತಲೂ ಬೆಳಕನ್ನು ಹರಡಿದಾಗ ಅಲ್ಲಾಹು ಅವರ ಬೆಳಕನ್ನು ನಂದಿಸಿದನು ಮತ್ತು ಅವರನ್ನು ಏನೂ ಕಾಣದವರಂತೆ ಅಂಧಕಾರದಲ್ಲಿ ಬಿಟ್ಟುಬಿಟ್ಟನು.” [ಕುರ್‌ಆನ್ 2:17]**

ಅನೇಕ ಹದೀಸ್‌ಗಳಲ್ಲೂ ಉದಾಹರಣೆಗಳ ಮೂಲಕ ವಿವರಿಸುವ ಪ್ರವಾದಿ(ﷺ)ರವರ ಈ ಶೈಲಿಯನ್ನು ಕಾಣಬಹುದಾಗಿದೆ.

ಉದಾಹರಣೆಗೆ:

« مَثَلُ الْمُؤْمِنِ مَثَلُ النَّخْلَةِ »

**“ವಿಶ್ವಾಸಿಯ ಉದಾಹರಣೆಯು ಖರ್ಜೂರ ಮರದ ಉದಾಹರಣೆಯಂತಾಗಿದೆ.”** [ಅತ್ತಬರಾನೀ]

« أَرَأَيْتُمْ لَوْ أَنَّ نَهْرًا بِبَابِ أَحَدِكُمْ يَغْتَسِلُ مِنْهُ خَمْسَ مَرَّاتٍ...»

**“ನಿಮ್ಮಲ್ಲೊಬ್ಬರ ಮನೆಯ ಮುಂದೆ ಒಂದು ಹೊಳೆಯಿದ್ದು ಆತ ಅದರಲ್ಲಿ ಐದು ಹೊತ್ತು ಸ್ನಾನ ಮಾಡುವುದಾದರೆ...”** [ಮುಸ್ಲಿಮ್]

## ಚೀಟಿಯೆತ್ತಲು ಅನುಮತಿಯಿದೆ

ಸಮಸ್ಯೆಗಳು ಮತ್ತು ಭಿನ್ನಾಭಿಪ್ರಾಯಗಳು ಎದುರಾಗುವಾಗ, ಚೀಟಿಯೆತ್ತುವ ಮೂಲಕವಲ್ಲದೆ ಒಂದು ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗದಿದ್ದರೆ ಚೀಟಿಯೆತ್ತಿ ನಿರ್ಧರಿಸುವುದಕ್ಕೆ ಅನುಮತಿಯಿದೆ. ಉತ್ತರಾಧಿಕಾರ ಸೊತ್ತಿನ ವ್ಯಾಜ್ಯದೊಂದಿಗೆ ಇಬ್ಬರು ವ್ಯಕ್ತಿಗಳು ಪ್ರವಾದಿ(ﷺ)ರವರ ಬಳಿಗೆ ಬಂದಾಗ ಪ್ರವಾದಿ(ﷺ)ರವರು ಚೀಟಿಯೆತ್ತಿ ನಿರ್ಧರಿಸುವಂತೆ ಹೇಳಿದ್ದರು [ಅಬೂದಾವೂದ್]. ಪ್ರವಾದಿ(ﷺ)ರವರು ದೂರ ಪ್ರಯಾಣ ಮಾಡುವಾಗ ತಮ್ಮ ಪತ್ನಿಯರಲ್ಲಿ ಯಾರನ್ನು ಜೊತೆಗೆ ಕರೆದೊಯ್ಯಬೇಕೆಂಬ ಬಗ್ಗೆ ಚೀಟಿಯೆತ್ತಿ ನಿರ್ಧರಿಸುತ್ತಿದ್ದರು.

## ತಪ್ಪು ಇಜ್ತಿಹಾದನ್ನು ತಿರಸ್ಕರಿಸಬೇಕು

ಒಬ್ಬ ವ್ಯಕ್ತಿ ತನ್ನ ತಪ್ಪು ಇಜ್ತಿಹಾದ್‌ನೊಂದಿಗೆ ಮುಂದುವರಿಯುವುದನ್ನು ತಡೆಯಬೇಕಾದುದು ಅತ್ಯಾವಶ್ಯಕವಾಗಿದೆ. ಯಾಕೆಂದರೆ ಹಡಗಿನಲ್ಲಿ ತೂತು ಕೊರೆಯಬೇಕೆಂಬುದು ಸುಲಭವಾಗಿ ನೀರು ಪಡೆಯುವುದಕ್ಕಾಗಿ ಆ ವ್ಯಕ್ತಿ ಮಾಡಿದ ಇಜ್ತಿಹಾದ್ ಆಗಿತ್ತು. ಆದರೆ ಆ ಇಜ್ತಿಹಾದ್ ತಪ್ಪು ಎಂಬುದು ಸ್ಪಷ್ಟ. ಆತನನ್ನು ಆತನ ಇಜ್ತಿಹಾದ್‌ನೊಂದಿಗೆ ಮುಂದುವರಿಯಲು ಬಿಟ್ಟರೆ ಇಡೀ ಹಡಗು ಮುಳುಗುವ ಸಾಧ್ಯತೆಯಿದೆ. ಆದ್ದರಿಂದ ಆ ಇಜ್ತಿಹಾದನ್ನು ತಿರಸ್ಕರಿಸಬೇಕಾಗಿದೆ. ಯಾಕೆಂದರೆ ಅದು ನಾಶದೆಡೆಗೆ ಒಯ್ಯುವ ಇಜ್ತಿಹಾದ್ ಆಗಿದೆ. ಆದ್ದರಿಂದಲೇ ಪ್ರವಾದಿ(ﷺ)ರವರು ಇಂತಹ ಇಜ್ತಿಹಾದ್ ಮಾಡುವುದನ್ನು ವಿರೋಧಿಸುತ್ತಿದ್ದರು.

ಒಮ್ಮೆ ಮಖ್ಝೂಮೀ ಜನಾಂಗಕ್ಕೆ ಸೇರಿದ ಒಬ್ಬ ಸ್ತ್ರೀ ಕಳ್ಳತನ ಮಾಡಿದಾಗ ಉಸಾಮಾ ಇಬ್ನ್ ಝೈದ್(ﷺ)ರವರು ಆಕೆಯ ಪರವಾಗಿ ಪ್ರವಾದಿ(ﷺ)ರವರಲ್ಲಿ ಶಿಫಾರಸು ಮಾಡಿದರು. ಆಗ ಪ್ರವಾದಿ(ﷺ)ರವರು ಅವರನ್ನು ತಡೆದು ಅವರಿಗೆ ಎಚ್ಚರಿಕೆಯನ್ನು ಕೊಟ್ಟರು. ಯಾಕೆಂದರೆ ಆ ಶಿಫಾರಸು ಅವರ ತಪ್ಪು ಇಜ್ತಿಹಾದ್‌ನಿಂದ ಉದ್ಭವಿಸಿದ್ದಾಗಿತ್ತು. ಪ್ರವಾದಿ(ﷺ)ರವರು ಅವರೊಂದಿಗೆ ಕೇಳಿದರು:

« أَتُشَفِّعُ فِي حَدٍّ مِنْ حُدُودِ اللَّهِ؟ »

**"ಅಲ್ಲಾಹನ ನಿಯಮಗಳಲ್ಲಿ ಸೇರಿದ ಒಂದು ನಿಯಮದ ವಿಷಯದಲ್ಲಿ ತಾವು ಶಿಫಾರಸು ಮಾಡುತ್ತಿರುವಿರಾ?" [ಅಲ್‌ಬುಖಾರಿ]**

ಸುನ್ನತ್ತಿಗೆ ವಿರುದ್ಧವಾಗಿ ನಿರ್ಮಿಸಲಾಗುವ ಬಿದ್‌ಅತ್‌ಗಳು ಕೂಡ ಇದರಲ್ಲಿ ಸೇರುತ್ತವೆ. ಯಾಕೆಂದರೆ ಬಿದ್‌ಅತ್‌ಗಳ ವಿಷಯದಲ್ಲಿರುವ ಇಜ್ತಿಹಾದ್‌ಗಳು ತಿರಸ್ಕೃತವಾಗಿವೆ. ಯಾಕೆಂದರೆ ಅವು ಪಥಭ್ರಷ್ಟತೆಯಾಗಿವೆ. ಅವು ಮನುಷ್ಯನನ್ನು ನೇರವಾದ ಹಾದಿಯಿಂದ ವಿದೂರಗೊಳಿಸುವುದಲ್ಲದೆ ಬೇರೇನನ್ನೂ ಮಾಡುವುದಿಲ್ಲ. ಐಹಿಕ ವಿಷಯಗಳಲ್ಲಿ ತಪ್ಪು ಇಜ್ತಿಹಾದ್ ಮಾಡುವುದನ್ನು ವಿರೋಧಿಸಿರುವಾಗ ಧಾರ್ಮಿಕ ವಿಷಯಗಳಲ್ಲಿರುವ ತಪ್ಪು ಇಜ್ತಿಹಾದ್‌ಗಳನ್ನು ವಿರೋಧಿಸಬೇಕಾದುದು ಅತ್ಯಾವಶ್ಯಕ ವಾಗಿದೆ.

ಇಬಾದತ್‌ಗಳಲ್ಲಿ ಕಠೋರತೆಯನ್ನು ಪಾಲಿಸಿದರೆ ಅದು ತಮ್ಮನ್ನು ಪ್ರವಾದಿ(ﷺ)ರವರ ಸ್ಥಾನಕ್ಕೆ ತಲುಪಿಸುತ್ತದೆ ಎಂದು ಭಾವಿಸಿದ ಮೂರು ಜನರು ಇದಕ್ಕೆ ಉತ್ತಮ ಉದಾಹರಣೆಯಾಗಿದ್ದಾರೆ. ಅವರಲ್ಲೊಬ್ಬರು ತಾನು ಇನ್ನು ಮುಂದೆ ಎಲ್ಲ ದಿನಗಳಲ್ಲೂ ಉಪವಾಸ ಆಚರಿಸುವೆನು ಎಂದರು. ಇನ್ನೊಬ್ಬರು ತಾನು ಇನ್ನು ಮುಂದೆ ಪತ್ನಿಯರ ಬಳಿಗೆ ತೆರಳಲಾರೆನು ಎಂದರು. ಇನ್ನೊಬ್ಬರು ತಾನು ರಾತ್ರಿ ನಿದ್ದೆ ಮಾಡದೆ ನಮಾಝ್ ಮಾಡುತ್ತಿರುವೆನು ಎಂದರು. ಇದು ಅವರ ಇಜ್ತಿಹಾದ್ ಆಗಿತ್ತು. ಆದರೆ ಇದು ತಪ್ಪು ಇಜ್ತಿಹಾದ್ ಆಗಿತ್ತು. ಆದ್ದರಿಂದಲೇ ಪ್ರವಾದಿ(ﷺ)ರವರು ಅವರಿಗೆ ಎಚ್ಚರಿಕೆ ನೀಡುತ್ತಾ ಹೇಳಿದರು:

« مَنْ رَغِبَ عَنْ سُنَّتِي فَلَيْسَ مِنِّي »

**"ಯಾರು ನನ್ನ ಸುನ್ನತ್ತನ್ನು ಅಸಹ್ಯಪಡುತ್ತಾನೋ ಅವನು ನನ್ನಲ್ಲಿ ಸೇರಿದವನಲ್ಲ." [ಅಲ್‌ಬುಖಾರಿ]**

## ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಇಸ್ಲಾಮ್

ಒಬ್ಬ ಮುಸ್ಲಿಮ್ ತನ್ನ ಎಲ್ಲ ವ್ಯವಹಾರಗಳಲ್ಲೂ, ತನ್ನ ಎಲ್ಲ ಕಾರ್ಯಗಳಲ್ಲೂ ಅಲ್ಲಾಹನ ದಾಸನಾಗಿದ್ದಾನೆ. ಶರೀಅತ್ ನಿರ್ದೇಶಿಸಿದ ವಿಧಾನವನ್ನು ಅನುಸರಿಸಿಯೇ ಅವನು ಮುಂದುವರಿಯಬೇಕಾಗಿದೆ. ಶರೀಅತ್ತಿನಲ್ಲಿರುವುದು ಎರಡೇ ಭಾಷೆ. 'ಮಾಡಬೇಕು' ಮತ್ತು 'ಮಾಡಬಾರದು'. ತನಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿದೆಯೆಂದು ವಾದಿಸುತ್ತಾ ಶರೀಅತ್ತಿನ ನಿರ್ದೇಶನಕ್ಕೆ ವಿರೋಧವಾಗಿ ಸಾಗಲು ಯಾರಿಗೂ ಅನುಮತಿಯಿಲ್ಲ.

ಆದರೆ ಇಂದು ಹೆಚ್ಚಿನ ಮುಸ್ಲಿಮರೂ ಇದಕ್ಕೆ ವಿರುದ್ಧವಾಗಿ ಯೋಚಿಸುತ್ತಾರೆ. ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ತಮ್ಮ ಇಚ್ಛೆಯ ಪ್ರಕಾರ ತಮಗೆ ಏನು ಬೇಕಾದರೂ ಮಾಡುವ ಸ್ವಾತಂತ್ರ್ಯವಿದೆ ಎಂದು ಅವರು ಭಾವಿಸಿಕೊಂಡಿದ್ದಾರೆ. ತಮ್ಮ ಕೃತ್ಯವು ಇಸ್ಲಾಮಿಗೆ ಮತ್ತು ಅದರ ಶಿಕ್ಷಣಕ್ಕೆ ವಿರುದ್ಧವಾಗಿದೆಯೋ ಎಂದು ಅವರು ನೋಡುವುದಿಲ್ಲ. ಅವರ ಪ್ರಕಾರ ಅಭಿವ್ಯಕ್ತಿ ಸ್ವಾತಂತ್ರ್ಯವು ಅನಿರ್ಬಂಧಿತವಾಗಿದೆ. ಶರೀಅತ್ತಿಗೂ ಕೂಡ ಅದರ ಮೇಲೆ ನಿರ್ಬಂಧ ಹೇರಲು ಸಾಧ್ಯವಿಲ್ಲ ಎಂದು ಅವರು ಭಾವಿಸುತ್ತಾರೆ.

ಚೀಟಿಯೆತ್ತುವ ಮೂಲಕ ತನಗೆ ಸಿಕ್ಕಿದ ಸ್ಥಳದಲ್ಲಿ, ನೀರನ್ನು ಪಡೆಯುದಕ್ಕೋಸ್ಕರ ಕೈಯಲ್ಲಿ ಕೊಡಲಿಯನ್ನು ಹಿಡಿದುಕೊಂಡು ತೂತು ಕೊರೆಯಲು ಉದ್ದೇಶಿಸಿದ ವ್ಯಕ್ತಿ, ತಾನು ಮಾಡುತ್ತಿರುವ ಈ ಕೃತ್ಯವು ತನಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವಾಗಿದೆ ಎಂದು ಭಾವಿಸಿಕೊಂಡರೆ ಪರಿಸ್ಥಿತಿ ಏನಾಗಬಹುದು? ಈ ವ್ಯಕ್ತಿ ಮಾಡುವ ಈ ಕೃತ್ಯದ ಪರಿಣಾಮ ಏನಾಗಿರಬಹುದೆಂಬ ಅರಿವಿದ್ದೂ ಸಹ, ಈ ವ್ಯಕ್ತಿಯ ಕೃತ್ಯವನ್ನು ಹಡಗಿನಲ್ಲಿರುವ ಜನರೆಲ್ಲರೂ ಒಪ್ಪಿಕೊಂಡು ಸುಮ್ಮನಾದರೆ ನಾವು ಅವರನ್ನು ಏನೆಂದು ಕರೆಯಬೇಕು? ಅವರನ್ನು ಹುಚ್ಚರೆಂದೇ ಕರೆಯಬೇಕಾಗಿದೆ. ಯಾಕೆಂದರೆ ಅವರು ತಮ್ಮ ಪ್ರಾಣವನ್ನು ಬಲಿಕೊಡುವ ಮೂಲಕ ಆ ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡುತ್ತಿದ್ದಾರೆ. ಆದರೆ ಅವರು ಬುದ್ಧಿವಂತರಾದರೆ ಅವನ ಆ ಕೃತ್ಯವನ್ನು ತಡೆಯಬೇಕಾಗಿದೆ. ಆದ್ದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯವು ನಿರ್ಬಂಧಿತವಾಗಿರಬೇಕಾಗಿದೆ. ಅದು ಸಮಾಜದ ಸಮೂಲ ಅಭಿವೃದ್ಧಿಗಿರುವ ಶರೀಅತ್ತಿನ ನಿಯಮಗಳಿಗೆ ಬದ್ಧವಾಗಿರಬೇಕಾಗಿದೆ.

ಪ್ರತಿಯೊಬ್ಬ ವ್ಯಕ್ತಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂಬ ಪರಿಕಲ್ಪನೆಯನ್ನು ನಾವು ಒಪ್ಪಿಕೊಳ್ಳುವುದಾದರೆ ವ್ಯಭಿಚಾರ ಮಾಡುವವರು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಲ್ಲಿ ವ್ಯಭಿಚಾರ ಮಾಡುವರು. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಲ್ಲಿ ಮಹಿಳೆಯರು ಅರೆನಗ್ನ ವಸ್ತ್ರಗಳನ್ನು ಧರಿಸಿ ಬೀದಿಗಿಳಿಯುವರು. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಲ್ಲಿ ಜನರು ಅಲ್ಲಾಹನ ಧರ್ಮದ ಬಗ್ಗೆ ತಮಗೆ ತೋಚಿದಂತೆ ಮಾತನಾಡುವರು. ಅಭಿವ್ಯಕ್ತಿ

ಸ್ವಾತಂತ್ರ್ಯದ ಹೆಸರಲ್ಲಿ ಜನರು ಹರಾಮ್‌ಗಳನ್ನು ಹಲಾಲ್ ಮಾಡುವರು ಮತ್ತು ಹಲಾಲ್‌ಗಳನ್ನು ಹರಾಮ್ ಮಾಡುವರು. ಇವೆಲ್ಲದರ ಪರಿಣಾಮವೇನಾಗಬಹುದು?

ಆದ್ದರಿಂದಲೇ ಪ್ರವಾದಿ(ﷺ)ರವರು ಧರ್ಮ ವಿರೋಧಿಯಾಗಿರುವ ಈ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣವನ್ನು ಹಾಕಿದರು. ಒಬ್ಬ ವ್ಯಕ್ತಿ ಇಸ್ಲಾಮ್ ಸ್ವೀಕರಿಸುವುದಕ್ಕಾಗಿ ಪ್ರವಾದಿ(ﷺ)ರವರ ಬಳಿಗೆ ಬಂದರು. ಆದರೆ ತನಗೆ ವ್ಯಭಿಚಾರದ ವಿಷಯದಲ್ಲಿ ರಿಯಾಯಿತಿ ನೀಡಬೇಕೆಂದು ಆ ವ್ಯಕ್ತಿ ಪ್ರವಾದಿ(ﷺ)ರವರೊಂದಿಗೆ ವಿನಂತಿಸಿದರು. ಆಗ ಪ್ರವಾದಿ(ﷺ)ರವರು ಆ ವ್ಯಕ್ತಿಯೊಂದಿಗೆ ಕೇಳಿದರು:

« أَتَرْضَاهُ لِأُمِّكَ...؟ »

**“ನಿನ್ನ ತಾಯಿಯೊಂದಿಗೆ ಯಾರಾದರೂ ವ್ಯಭಿಚಾರ ಮಾಡುವುದನ್ನು ನೀನು ಇಷ್ಟಪಡುತ್ತೀಯಾ...?”**

ಆ ವ್ಯಕ್ತಿ ಇಲ್ಲವೆಂದರು. ಆಗ ಪ್ರವಾದಿ(ﷺ)ರವರು ಹೇಳಿದರು:

« وَكَذَلِكَ النَّاسُ لَا يَرْضَوْنَهُ لِأُمَّهَاتِهِمْ »

**“ಅದೇ ರೀತಿ ತಮ್ಮ ತಾಯಂದಿರೊಂದಿಗೆ ಯಾರಾದರೂ ವ್ಯಭಿಚಾರ ಮಾಡುವುದನ್ನು ಇತರ ಜನರೂ ಇಷ್ಟಪಡುವುದಿಲ್ಲ.”**

ಆದ್ದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯವು ಶರೀಅತ್ತಿನ ನಿಯಮಗಳಡಿಯಲ್ಲಿ ನಿರ್ಬಂಧಿತ ವಾಗಿರಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿ ಅವನವನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿದರೆ ಧರ್ಮವೆಂಬುದು ಖಂಡಿತ ಉಳಿಯಲಾರದು.

ಹದೀಸಿನ ಆರಂಭದಿಂದ ಕೊನೆಯವರೆಗೂ ಈ ವಿಷಯವನ್ನು ಸ್ಪಷ್ಟವಾಗಿ ಹೇಳಲಾಗಿದೆ. ಹದೀಸಿನ ಆರಂಭದಲ್ಲಿ ಪ್ರವಾದಿ(ﷺ)ರವರು ಜನರನ್ನು ಎರಡು ಗುಂಪುಗಳಾಗಿ ವಿಂಗಡಿಸಿದರು. ಒಂದು ಸದಾಚಾರವನ್ನು ಬೋಧಿಸುವ ಮತ್ತು ದುರಾಚಾರವನ್ನು ವಿರೋಧಿಸುವ, ದುರಾಚಾರ ಮಾಡುವ ಜನರಿಗೆ ಎಚ್ಚರಿಕೆಯನ್ನು ನೀಡುವ ಹಾಗೂ ದುರಾಚಾರದ ಪರಿಣಾಮದ ಬಗ್ಗೆ ಅವರನ್ನು ಜಾಗೃತರನ್ನಾಗಿಸುವ ಗುಂಪು. ಇನ್ನೊಂದು ಈ ವಿಷಯಗಳನ್ನು ಕಡೆಗಣಿಸುವ ಗುಂಪು. ಇವರು ದುರಾಚಾರ ಮಾಡುವ ಜನರನ್ನು ವಿರೋಧಿಸುವುದೂ ಇಲ್ಲ. ಅವರಿಗೆ ಸದಾಚಾರವನ್ನು ಆದೇಶಿಸುವುದೂ ಇಲ್ಲ. ನಂತರ ಹದೀಸಿನ ಕೊನೆಯಲ್ಲಿ, ರಕ್ಷಣೆಗಿರುವ ಮಾರ್ಗವು ಮೊದಲ ಗುಂಪಾಗಿದೆಯೆಂದು ಪ್ರವಾದಿ(ﷺ)ರವರು ವಿವರಿಸುತ್ತಾರೆ. ಅಂದರೆ ಸದಾಚಾರವನ್ನು ಆದೇಶಿಸುವುದು ಮತ್ತು ದುರಾಚಾರವನ್ನು ವಿರೋಧಿಸುವುದೇ ರಕ್ಷಣೆಗಿರುವ ಮಾರ್ಗವಾಗಿದೆ. ಒಂದು ವೇಳೆ ಇವರು

ದುರಾಚಾರವನ್ನು ವಿರೋಧಿಸದಿರುತ್ತಿದ್ದಲ್ಲಿ ಇವರೂ ಸೇರಿದಂತೆ ಎಲ್ಲರೂ ಆ ಹಡಗಿನೊಂದಿಗೆ ಮುಳುಗಿ ಹೋಗುತ್ತಿದ್ದರು.

ಇದೇ ವಿಷಯವನ್ನು ಯಹೂದಿಗಳಲ್ಲಿ ಸೇರಿದ 'ಅಸ್‌ಹಾಬು ಸ್ಸಬ್ತ್'ನ (ಶನಿವಾರದ ಜನರ) ಕಥೆಯಲ್ಲಿ ಕುರ್‌ಆನ್ ವಿವರಿಸಿಕೊಟ್ಟಿದೆ. ಅಲ್ಲಾಹು ಹೇಳುತ್ತಾನೆ:

﴿ وَاسْأَلْهُمْ عَنِ الْقَرْيَةِ الَّتِي كَانَتْ حَاضِرَةَ الْبَحْرِ إِذْ يَعْدُونَ فِي السَّبْتِ إِذْ تَأْتِيهِمْ حِيتَانُهُمْ يَوْمَ سَبْتِهِمْ شُرَّعًا وَيَوْمَ لَا يَسْبِتُونَ لَا تَأْتِيهِمْ كَذَلِكَ نَبْلُوهُمْ بِمَا كَانُوا يَفْسُقُونَ * وَإِذْ قَالَتْ أُمَّةٌ مِنْهُمْ لِمَ تَعِظُونَ قَوْمًا اللَّهُ مُهْلِكُهُمْ أَوْ مُعَذِّبُهُمْ عَذَابًا شَدِيدًا قَالُوا مَعْذِرَةً إِلَى رَبِّكُمْ وَلَعَلَّهُمْ يَتَّقُونَ * فَلَمَّا نَسُوا مَا ذُكِّرُوا بِهِ أَنْجَيْنَا الَّذِينَ يَنْهَوْنَ عَنِ السُّوءِ وَأَخَذْنَا الَّذِينَ ظَلَمُوا بِعَذَابٍ بَئِيسٍ بِمَا كَانُوا يَفْسُقُونَ * فَلَمَّا عَتَوْا عَنْ مَا نُهُوا عَنْهُ قُلْنَا لَهُمْ كُونُوا قِرَدَةً خَاسِئِينَ ﴾

**"ಸಮುದ್ರ ತೀರದಲ್ಲಿದ್ದ ಆ ಪಟ್ಟಣದ ಬಗ್ಗೆ ಅವರೊಂದಿಗೆ ಕೇಳಿ ನೋಡಿರಿ. (ಅಂದರೆ) ಸಬ್ಬತ್ ದಿನ (ಶನಿವಾರ)ವನ್ನು ಆಚರಿಸುವುದರಲ್ಲಿ ಅವರು ಅತಿಕ್ರಮವೆಸಗಿದ ಸಂದರ್ಭದ ಬಗ್ಗೆ. ಅವರ ಸಬ್ಬತ್ ದಿನದಂದು ಅವರಿಗೆ ಬೇಕಾದ ಮೀನುಗಳು ನೀರಿನ ಮೇಲೆ ತಲೆಯೆತ್ತುತ್ತಾ ಅವರೆಡೆಗೆ ಬರುತ್ತಿದ್ದ ಮತ್ತು ಅವರು ಸಬ್ಬತ್ ಆಚರಿಸಬೇಕಾಗಿಲ್ಲದ ದಿನದಂದು ಅವರೆಡೆಗೆ ಬಾರದಿರುತ್ತಿದ್ದ ಸಂದರ್ಭ. ಅವರು ಧಿಕ್ಕಾರ ತೋರಿರುವುದರ ಫಲವಾಗಿ ನಾವು ಅವರನ್ನು ಹೀಗೆ ಪರೀಕ್ಷಿಸಿದೆವು. 'ಅಲ್ಲಾಹು ನಾಶ ಮಾಡಲಿರುವ ಅಥವಾ ಕಠಿಣವಾಗಿ ಶಿಕ್ಷಿಸಲಿರುವ ಒಂದು ಜನತೆಗೆ ನೀವೇಕೆ ಉಪದೇಶ ಮಾಡುತ್ತಿರುವಿರಿ' ಎಂದು ಅವರ ಪೈಕಿ ಒಂದು ಗುಂಪು ಹೇಳಿದ ಸಂದರ್ಭ(ವನ್ನು ಗಮನಿಸಿರಿ). ಅವರು ಹೇಳಿದರು: 'ಇದು ನಿಮ್ಮ ರಬ್ಬ್‌ನ ಬಳಿ (ನಾವು) ಅಪರಾಧದಿಂದ ಮುಕ್ತರಾಗುವ ಸಲುವಾಗಿದೆ. ಬಹುಶಃ ಅವರು ಭಯಭಕ್ತಿ ಪಾಲಿಸಲೂ ಬಹುದು'. ಆದರೆ ಅವರಿಗೆ ನೆನಪಿಸಿಕೊಡಲಾಗಿರುವುದನ್ನು ಅವರು ಮರೆತು ಬಿಟ್ಟಾಗ, ದುಷ್ಕೃತ್ಯವನ್ನು ವಿರೋಧಿಸಿದವರಾರೋ ಅವರನ್ನು ನಾವು ರಕ್ಷಿಸಿದೆವು. ಅಕ್ರಮಿಗಳಾದ ಜನರನ್ನು ಅವರು ಧಿಕ್ಕಾರ ತೋರಿರುವುದರ ಫಲವಾಗಿ ನಾವು ಕಠಿಣವಾದ ಶಿಕ್ಷೆಯ ಮೂಲಕ ಹಿಡಿದೆವು. ಅವರಿಗೆ ವಿರೋಧಿಸಲಾಗಿರುವ ವಿಷಯಗಳಲ್ಲೆಲ್ಲ ಅವರು ಧಿಕ್ಕಾರವನ್ನು ತೋರಿದಾಗ ನಾವು ಅವರೊಂದಿಗೆ ಹೇಳಿದೆವು: 'ನೀವು ನಿಕೃಷ್ಟರಾದ ಕಪಿಗಳಾಗಿರಿ'." [ಕುರ್‌ಆನ್ 7:163–166]**

ಈ ಆಯತ್‌ಗಳಲ್ಲಿ ವಿವರಿಸಲಾದಂತೆ ಅಲ್ಲಿ ಮೂರು ಗುಂಪು ಜನರಿದ್ದರು. ಒಂದು ಗುಂಪು ಹರಾಮ್ ಕೆಲಸವನ್ನು ಮಾಡಿದವರು. ಇನ್ನೊಂದು ಗುಂಪು ಆ ಹರಾಮನ್ನು ವಿರೋಧಿಸಿದವರು ಮತ್ತು ಅವರಿಗೆ ಉಪದೇಶ ಮಾಡಿದವರು. ಮೂರನೇ ಗುಂಪು

ಹರಾಮನ್ನು ವಿರೋಧಿಸದೆ ಅದನ್ನು ವಿರೋಧಿಸಿದವರನ್ನೇ ಟೀಕಿಸಿದವರು. ಅಲ್ಲಾಹು ಹರಾಮ್ ವಿರೋಧಿಸಿದವರನ್ನು ರಕ್ಷಿಸಿದನು ಮತ್ತು ಹರಾಮ್ ಮಾಡಿದವರನ್ನು ಮತ್ತು ಅದನ್ನು ವಿರೋಧಿಸದವರನ್ನು ನಾಶ ಮಾಡಿದನು. ಆದ್ದರಿಂದ ಸದಾಚಾರವನ್ನು ಆದೇಶಿಸುವುದು ಮತ್ತು ದುರಾಚಾರವನ್ನು ವಿರೋಧಿಸುವುದು ಅತ್ಯಗತ್ಯವಾಗಿದೆ. ಒಳಿತನ್ನು ಹೆಚ್ಚಿಸಲು, ಕೆಡುಕನ್ನು ಅಳಿಸಲು, ಸಮಾಜವನ್ನು ನಾಶ ಮತ್ತು ಧ್ವಂಸದಿಂದ ರಕ್ಷಿಸಲು ಒಳಿತನ್ನು ಬೋಧಿಸುವುದು ಮತ್ತು ಕೆಡುಕನ್ನು ವಿರೋಧಿಸುವುದು ಕಡ್ಡಾಯವಾಗಿದೆ.

## ಕೆಲವರು ಮಾಡುವ ಪಾಪಕೃತ್ಯದಿಂದಾಗಿ ಎಲ್ಲರೂ ಶಿಕ್ಷೆ ಅನುಭವಿಸಬೇಕಾಗುತ್ತದೆ

ಈಗಾಗಲೇ ಹೇಳಿದಂತೆ ಅಭಿವ್ಯಕ್ತಿ ಸ್ವಾತಂತ್ರ್ಯದಿಂದಾಗಿ ಅಥವಾ ತನಗೆ ತೋಚಿದಂತೆ ಮಾಡುವ ಸ್ವಾತಂತ್ರ್ಯವು ತನಗಿದೆ ಎಂಬ ಮನುಷ್ಯನ ದಾರ್ಷ್ಟ್ಯದಿಂದಾಗಿ ಕ್ಷೋಭೆ ಮತ್ತು ವಿನಾಶಗಳು ತಾಂಡವವಾಡುತ್ತವೆ ಮತ್ತು ಪಾಪಕೃತ್ಯಗಳು ಹಾಗೂ ಅಶ್ಲೀಲತೆಗಳು ರಾರಾಜಿಸುತ್ತವೆ. ಇಂತಹ ಸಂದರ್ಭಗಳಲ್ಲಿ ಸಜ್ಜನರೆನಿಸಿಕೊಂಡವರು ಸದಾಚಾರವನ್ನು ಆದೇಶಿಸುವ ಮತ್ತು ದುರಾಚಾರವನ್ನು ವಿರೋಧಿಸುವ ತಮ್ಮ ಕಡ್ಡಾಯ ಕರ್ತವ್ಯವನ್ನು ನಿರ್ಲಕ್ಷಿಸಿ 'ಅವರು ಏನು ಬೇಕಾದರೂ ಮಾಡಲಿ; ನಾನು ಅವರ ಗೋಜಿಗೆ ಹೋಗುವುದಿಲ್ಲ' ಎಂಬ ತಟಸ್ಥ ನಿಲುವನ್ನು ತಾಳಿದರೆ, ಅಲ್ಲಾಹನಿಂದ ಎರಗುವ ಶಿಕ್ಷೆಯು ಎಲ್ಲರನ್ನೂ ಬಾಧಿಸುತ್ತದೆ. ಈ ಹದೀಸಿನಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ ಹೇಳಲಾಗಿದೆ. ಹಡಗಿನಲ್ಲಿರುವ ಪ್ರಯಾಣಿಕರ ಪೈಕಿ ಕೆಲವರು ಅದರಲ್ಲಿ ತೂತು ಕೊರೆಯಲು ನಿರ್ಧರಿಸಿದಾಗ ಇತರ ಪ್ರಯಾಣಿಕರು ಅವರ ಕೈ ಹಿಡಿದು ಅವರನ್ನು ತಡೆಯದಿದ್ದರೆ ಸಂಪೂರ್ಣ ಹಡಗು ಮುಳುಗಿ ತೂತು ಕೊರೆದವರು ಮಾತ್ರವಲ್ಲದೆ ಹಡಗಿನಲ್ಲಿರುವ ಎಲ್ಲರೂ ನಾಶವಾಗುವರು. ಅವರು ಅವರನ್ನು ತಡೆದರೆ ಹಡಗಿನಲ್ಲಿರುವ ಎಲ್ಲರೂ ಪಾರಾಗುವರು.

ಇದೇ ವಿಷಯವನ್ನು ಇನ್ನೊಂದು ಹದೀಸಿನಲ್ಲಿ ಪ್ರವಾದಿ(ﷺ)ರವರು ಹೀಗೆ ವಿವರಿಸುತ್ತಾರೆ:

« مَا مِنْ قَوْمٍ يُعْمَلُ فِيهِمُ الْمَعَاصِي هُمْ أَعَزُّ وَأَكْثَرُ مِمَّنْ يَعْمَلُهُ، ثُمَّ لَمْ يُغَيِّرُوهُ إِلَّا عَمَّهُمُ اللَّهُ تَعَالَى بِعِقَابٍ »

**“ಪಾಪಕೃತ್ಯಗಳನ್ನು ಮಾಡಲಾಗುತ್ತಿರುವ ಯಾವ ಜನತೆಯಲ್ಲಿ ಪಾಪಕೃತ್ಯಗಳನ್ನು ಮಾಡುವ ಜನರಿಗಿಂತಲೂ ಇತರ ಜನರು ಪರಾಕ್ರಮಿಗಳು ಮತ್ತು ಬಹುಸಂಖ್ಯಾತ ರಾಗಿದ್ದೂ ಸಹ ಅವರು ಆ ಪಾಪಕೃತ್ಯ ಮಾಡುವವರನ್ನು ತಡೆಯುವುದಿಲ್ಲವಾದರೆ, ಅಲ್ಲಾಹು ತನ್ನ ಶಿಕ್ಷೆಯನ್ನು ಅವರೆಲ್ಲರ ಮೇಲೂ ಎರಗಿಸುವನು.” [ಅಬೂ ದಾವೂದ್; ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ].**

ಹೌದು! ಪಾಪಕೃತ್ಯಗಳು ಗೋಚರವಾಗುವಾಗ ಸಜ್ಜನರಾಗಿರುವವರಿಗೆ ಅವುಗಳನ್ನು ತಡೆಗಟ್ಟುವ ಸಾಮರ್ಥ್ಯವಿದ್ದೂ ಅವರು ಅವುಗಳ ಬಗ್ಗೆ ಮೌನವಹಿಸಿದರೆ ಅಲ್ಲಾಹನ ವತಿಯಿಂದ ಇಳಿಯುವ ಶಿಕ್ಷೆಯು ಅವರೆಲ್ಲರ ಮೇಲೂ ಎರಗುವುದು. ತರುವಾಯ ಅವರನ್ನು ಅವರ ನಿಯ್ಯತ್‌ಗಳ ಪ್ರಕಾರ ಪುನರುತ್ಥಾನಗೊಳಿಸಲಾಗುವುದು. ಶಿಕ್ಷೆಯು ಸಜ್ಜನರನ್ನು ಮತ್ತು ದುರ್ಜನರನ್ನು ಒಂದೇ ರೀತಿಯಾಗಿ ಬಾಧಿಸುವುದು. ಯಾಕೆಂದರೆ ಮೌನ ವಹಿಸುವವನು ತೃಪ್ತಿಪಡುವವನಿಗೆ ಸಮಾನವಾಗಿದ್ದಾನೆ. ಪಾಪಕೃತ್ಯಗಳ ಬಗ್ಗೆ ತೃಪ್ತಿಪಡುವವರು ಮತ್ತು ಪಾಪಕೃತ್ಯಗಳನ್ನು ಮಾಡುವವರು ಸಮಾನರಾಗಿದ್ದಾರೆ.

ಸಮುದಾಯವನ್ನು ಬಾಧಿಸಲಿರುವ ಕೆಡುಕಿನ ಬಗ್ಗೆ ಪ್ರವಾದಿ(ﷺ)ರವರು ಪ್ರಸ್ತಾಪಿಸಿದಾಗ ಝೈನಬ್(ﷺ)ರವರು ಕೇಳುತ್ತಾರೆ:

أَنُهْلَكُ وَفِينَا الصَّالِحُونَ؟

**“ನಮ್ಮಲ್ಲಿ ಸಜ್ಜನರಿರುವಾಗ ನಾವೆಲ್ಲರೂ ನಾಶವಾಗುವೆವೇ?”**

ಪ್ರವಾದಿ(ﷺ)ರವರು ಹೇಳಿದರು:

« نَعَمْ، إِذَا كَثُرَ الْخَبَثُ »

**“ಹೌದು, ದುರ್ಜನರು ಅಧಿಕವಾಗುವಾಗ.” [ಅಲ್‌ಬುಖಾರಿ]**

ಅಂದರೆ ದುರ್ಜನರು ಅಧಿಕವಾಗುವಾಗ ಸಜ್ಜನರಾಗಿರುವವರು ಸುಧಾರಣೆಯನ್ನು ತಮ್ಮ ಬದುಕಿಗೆ ಮಾತ್ರ ಸೀಮಿತಗೊಳಿಸಿ ಸಮುದಾಯವನ್ನು ಸುಧಾರಣೆ ಮಾಡುವ ಇಚ್ಛಾಶಕ್ತಿಯನ್ನು ತೊರೆದರೆ; ಸಮುದಾಯಕ್ಕೆ ಸದಾಚಾರವನ್ನು ಆದೇಶಿಸುವ ಮತ್ತು ದುರಾಚಾರವನ್ನು ವಿರೋಧಿಸುವ ತಮ್ಮ ಕಡ್ಡಾಯ ಕರ್ತವ್ಯವನ್ನು ನಿರ್ಲಕ್ಷಿಸಿದರೆ; ಅದು ಅಲ್ಲಾಹನ ಶಿಕ್ಷೆ ಎರಗುವುದಕ್ಕಿರುವ ಅಪ್ಪಣೆಯಾಗಿ ಮಾರ್ಪಡುತ್ತದೆ.

ಅಲ್ಲಾಹು ಹೇಳುತ್ತಾನೆ:

﴿ وَمَا كَانَ رَبُّكَ لِيُهْلِكَ الْقُرَى بِظُلْمٍ وَأَهْلُهَا مُصْلِحُونَ ﴾

**"ಅನ್ಯಾಯದ ಕಾರಣದಿಂದಾಗಿ ತಮ್ಮ ರಬ್ಬ್ ಯಾವುದೇ ಪಟ್ಟಣವನ್ನೂ, ಅದರ ನಿವಾಸಿಗಳು ಸುಧಾರಣೆ ಮಾಡುವವರಾಗಿರುವಾಗ ನಾಶ ಮಾಡಲಾರನು." [ಕುರ್‌ಆನ್ 11:117]**

'ಅದರ ನಿವಾಸಿಗಳು ಸಜ್ಜನರಾಗಿರುವಾಗ' ಎಂದು ಅಲ್ಲಾಹು ಹೇಳಿಲ್ಲ. ಯಾಕೆಂದರೆ ಸಜ್ಜನರಿಗೂ, ಸುಧಾರಣೆ ಮಾಡುವ ಸಜ್ಜನರಿಗೂ ಬಹಳ ವ್ಯತ್ಯಾಸವಿದೆ. ಆದ್ದರಿಂದ ಸಜ್ಜನ ಎಂಬ ಪದವಿಯಿಂದ ಸುಧಾರಣೆ ಮಾಡುವ ಸಜ್ಜನ ಎಂಬ ಪದವಿಗೆ ಏರಬೇಕಾದುದು ಸಜ್ಜನರ ಪಾಲಿಗೆ ಅನಿವಾರ್ಯವಾಗಿದೆ.

## ಸಮಾಜದ ಸದಸ್ಯರು ಪರಸ್ಪರ ಸಹಾಯ ಸಹಕಾರ ಮಾಡುವುದು

ಹಡಗಿನ ಹದೀಸಿನಿಂದ ನಮಗೆ ಸ್ಪಷ್ಟವಾಗಿ ತಿಳಿದುಬರುವ ಪ್ರಕಾರ ಹಡಗಿನ ಮೇಲಂತಸ್ತಿನಲ್ಲಿರುವ ಜನರು ಕೆಳ ಅಂತಸ್ತಿನಲ್ಲಿರುವ ಜನರಿಗೆ ಸ್ವಲ್ಪ ನೀರನ್ನು ಕೊಂಡು ಹೋಗಿ ಕೊಟ್ಟಿರುತ್ತಿದ್ದರೆ; ಅವರ ಕೈ ಹಿಡಿದು ಅವರನ್ನು ಸಹೋದರರಂತೆ ನಡೆಸಿಕೊಂಡಿರುತ್ತಿದ್ದರೆ; ಸಮುದ್ರದಿಂದ ನೀರು ಸೇದುವ ವಿಷಯದಲ್ಲಿ ಅವರಿಗೆ ಸಹಾಯ ಸಹಕಾರ ಮಾಡಿರುತ್ತಿದ್ದರೆ; ಹಡಗಿನಲ್ಲಿ ತೂತು ಕೊರೆಯುವ ಆಲೋಚನೆಯನ್ನು ಅವರು ಮಾಡುತ್ತಿರಲಿಲ್ಲ.

ಅದೇ ರೀತಿ ಸಮಾಜದ ಸ್ಥಿತಿವಂತರು ಬಡವರಿಗೆ ಸಹಾಯ ಮಾಡುವುದಾದರೆ, ಸಬಲರು ದುರ್ಬಲರ ಕೈ ಹಿಡಿದು ಜೊತೆಯಾಗಿ ಸಂಚರಿಸುವುದಾದರೆ, ಸಮಾಜದ ಬೇಕು ಬೇಡಗಳಿಗೆ ಸಮಾಜದಲ್ಲಿರುವ ಉನ್ನತರು ಸ್ಪಂದಿಸುವುದಾದರೆ, ಸಮಾಜ ದಲ್ಲಿರುವ ಸದಸ್ಯರೆಲ್ಲರೂ ಪರಸ್ಪರ ಸಹೋದರ ಸಹೋದರಿಯರಂತೆ ಪರಸ್ಪರ ಸಹಾಯ ಸಹಕಾರ ಮಾಡುತ್ತಾ ಬಾಳುವುದಾದರೆ, ಅಂತಹ ಸಮಾಜದಲ್ಲಿ ಪಾಪಕೃತ್ಯಗಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗುವುದು ಎಂಬ ವಿಷಯದಲ್ಲಿ ಯಾವುದೇ ಸಂದೇಹವಿಲ್ಲ. ಯಾಕೆಂದರೆ ಒಬ್ಬ ವ್ಯಕ್ತಿಯ ಕಷ್ಟ ಸುಖಗಳಿಗೆ, ಬೇಕು ಬೇಡಗಳಿಗೆ ಆತನ ಸಮಾಜ ಸ್ಪಂದಿಸುತ್ತದೆ ಎಂದಾದರೆ; ಆತನಲ್ಲಿ ಕನಿಷ್ಠ ಮಾನವೀಯತೆ ಎಂಬುದಿದ್ದರೆ ಆ ಸಮಾಜಕ್ಕೆ ವಿರುದ್ಧವಾಗಿ ಸಾಗಲು, ಅದಕ್ಕೆ ಅಪಕೀರ್ತಿ ತರಲು ಅವನು ಉದ್ದೇಶಿಸಲಾರನು.

ಪುಣ್ಯದ ವಿಷಯದಲ್ಲಿ, ದೇವಭಕ್ತಿಯ ವಿಷಯದಲ್ಲಿ, ಅಲ್ಲಾಹನ ಆಜ್ಞಾಪಾಲನೆ ಮಾಡುವ ವಿಷಯದಲ್ಲಿ ಮತ್ತು ಒಳಿತಿನ ವಿಷಯದಲ್ಲಿ ಪರಸ್ಪರ ಸಹಾಯ ಸಹಕಾರ ಮಾಡುವುದು ಅತಿಶ್ರೇಷ್ಠವಾದ ಸಹಕಾರವಾಗಿದೆ.

ಅಲ್ಲಾಹು ಹೇಳುತ್ತಾನೆ:

﴿ وَتَعَاوَنُوا عَلَى الْبِرِّ وَالتَّقْوَى وَلَا تَعَاوَنُوا عَلَى الْإِثْمِ وَالْعُدْوَانِ ﴾

**"ನೀವು ಪುಣ್ಯದಲ್ಲಿ ಮತ್ತು ದೇವಭಕ್ತಿಯಲ್ಲಿ ಪರಸ್ಪರ ಸಹಕರಿಸಿರಿ. ಪಾಪಕೃತ್ಯದಲ್ಲಿ ಮತ್ತು ವಿದ್ವೇಷದಲ್ಲಿ ಪರಸ್ಪರ ಸಹಕರಿಸದಿರಿ." [ಕುರ್‌ಆನ್ 5:2]**

ಪ್ರವಾದಿ(ﷺ)ರವರ ಜೀವನ ಚರಿತ್ರೆಯನ್ನು ಓದಿದರೆ ಅವರು ತಮ್ಮ ಸಹಾಬಾಗಳ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾ, ಮಸೀದಿ ನಿರ್ಮಿಸುವುದರಲ್ಲೂ, ಹೊಂಡ ತೋಡುವುದರಲ್ಲೂ ಅವರಿಗೆ ಸಹಾಯ ಮಾಡುತ್ತಾ ಸಹಾಯ ಸಹಕಾರದ ಅತ್ಯುತ್ತಮ ಮಾದರಿಯನ್ನು ನಮಗೆ ತೋರಿಸಿಕೊಟ್ಟಿದ್ದಾರೆ.

## ಸರ್ವಾಧಿಕಾರ ಮತ್ತು ಸಮಾಲೋಚನೆಯಿಲ್ಲದಿರುವುದು ನಾಶಕ್ಕಿರುವ ಹೇತುವಾಗಿದೆ

ಫಿರ್‌ಔನ್ ಹೇಳಿದನು:

﴿ مَا أُرِيكُمْ إِلَّا مَا أَرَى وَمَا أَهْدِيكُمْ إِلَّا سَبِيلَ الرَّشَادِ ﴾

**"ನನಗೆ ಸರಿಯೆಂದು ಕಾಣುವ ಮಾರ್ಗವನ್ನೇ ಹೊರತು ಇನ್ನೇನನ್ನೂ ನಾನು ನಿಮಗೆ ತೋರಿಸಲಾರೆನು. ಸರಿಯಾದ ಮಾರ್ಗದೆಡೆಗೇ ಹೊರತು ಇನ್ನೆಲ್ಲಿಗೂ ನಾನು ನಿಮ್ಮನ್ನು ಮುನ್ನಡೆಸಲಾರೆನು." [ಕುರ್‌ಆನ್ 40:29]**

ಫಿರ್‌ಔನನ ಈ ರಾಜಕೀಯವು ತಿರಸ್ಕೃತವಾಗಿದೆ. ಯಾಕೆಂದರೆ ಇದರಲ್ಲಿ ಅಭಿಪ್ರಾಯಕ್ಕೆ ಬೆಲೆಯಿಲ್ಲ. ಇದರಲ್ಲಿ ವಿಮರ್ಶೆಗೆ ಬೆಲೆಯಿಲ್ಲ. ಇದು ಬುದ್ಧಿಯನ್ನು ಹೆಪ್ಪುಗಟ್ಟಿಸುವ ರಾಜಕೀಯವಾಗಿದೆ. ಫಿರ್‌ಔನನು ತನಗೆ ತೋಚಿದ್ದನ್ನು ಸನ್ಮಾರ್ಗವೆಂದು ಸಾರಿ ಅದನ್ನು ತನ್ನ ಪ್ರಜೆಗಳ ಮೇಲೆ ಬಲವಂತದಿಂದ ಹೇರಿದನು. ಕೊನೆಗೆ ಇದರ ಫಲಿತಾಂಶವೇನಾಯಿತು? ಫಿರ್‌ಔನನು ತನ್ನ ಜನತೆಯನ್ನು ಎಲ್ಲಿಗೆ ಮುನ್ನಡೆಸಿದನು? ಉತ್ತರವು ನಮಗೆ ಗೊತ್ತಿರುವುದೇ ಆಗಿದೆ. ಬನೂ ಇಸ್ರಾಈಲರ ಕಣ್ಣ ಮುಂದೆಯೇ ಅಲ್ಲಾಹು ಅವನನ್ನೂ ಅವನ ಸೈನ್ಯವನ್ನೂ ನದಿಯಲ್ಲಿ ಮುಳುಗಿಸಿ ನಾಶ ಮಾಡಿದನು.

ಆದ್ದರಿಂದ ಸಮಾಲೋಚನೆ ಮಾಡುವುದರ ಪ್ರಾಮುಖ್ಯತೆಯೆನ್ನು ಎತ್ತಿ ಹೇಳುತ್ತಾ ಅಲ್ಲಾಹು ಹೇಳುತ್ತಾನೆ:

﴿ وَشَاوِرْهُمْ فِي الْأَمْرِ ﴾

**“ವಿಷಯದಲ್ಲಿ ಅವರೊಂದಿಗೆ ಸಮಾಲೋಚನೆ ಮಾಡಿರಿ.” [ಕುರ್‌ಆನ್ 3:159]**

ಪ್ರವಾದಿ(ﷺ)ರವರು ಬದ್ರ್ ಯುದ್ಧದ ಸಂದರ್ಭದಲ್ಲೂ, ಉಹುದ್ ಯುದ್ಧದ ಸಂದರ್ಭದಲ್ಲೂ ಸಹಾಬಾಗಳೊಂದಿಗೆ ಸಮಾಲೋಚನೆ ಮಾಡಿದರು. ಖಂದಕ್ ಯುದ್ಧದ ಸಂದರ್ಭದಲ್ಲಿ ಸಲ್ಮಾನ್ ಅಲ್‌ಫಾರಿಸೀ(ﷺ)ಯವರ ಅಭಿಪ್ರಾಯವನ್ನು ಸ್ವೀಕರಿಸಿದರು. ಸಮಾಲೋಚನೆಗೆ ವಿವಿಧ ಮಜಲುಗಳಿವೆ. ಕೆಲವೊಂದು ವಿಷಯಗಳಲ್ಲಿ ಮುಸ್ಲಿಮನು ತನ್ನ ಏಕಾಭಿಪ್ರಾಯವನ್ನು ಇತರರ ಮೇಲೆ ಹೇರುವುದಕ್ಕೆ ಬದಲು ಸಮಾಲೋಚನೆ ಮಾಡಿ ಒಂದು ಸಮಾನ ತೀರ್ಮಾನಕ್ಕೆ ಬರಬೇಕಾದ ಆವಶ್ಯಕತೆಯಿದೆ.

## ಉದ್ದೇಶವು ಉತ್ತಮವಾಗಿದೆ ಎಂಬ ಕಾರಣದಿಂದ ಕೆಡುಕು ಒಳಿತಾಗದು; ಸುಳ್ಳು ಸತ್ಯವಾಗದು ಮತ್ತು ಬಿದ್‌ಅತ್ ಸುನ್ನತ್ ಆಗದು

ಹಡಗಿನ ಕೆಳಭಾಗದಲ್ಲಿ ತೂತು ಕೊರೆದು ನೀರನ್ನು ಪಡೆಯುವ ಅವರ ಉದ್ದೇಶವು ಉತ್ತಮವಾಗಿತ್ತು. ತಾವು ನೀರಿಗಾಗಿ ಮೇಲ್ಭಾಗಕ್ಕೆ ಹೋಗುವುದು, ಅಲ್ಲಿ ಮೇಲ್ಭಾಗದಲ್ಲಿರುವವರಿಗೆ ತೊಂದರೆ ಕೊಡುವುದು, ಪುನಃ ಕೆಳಗಿಳಿದು ಬರುವುದು, ಇವುಗಳಿಗೆ ಬದಲಾಗಿ ನಾವು ಇಲ್ಲಿಂದಲೇ ನೀರು ಪಡೆಯಬಹುದಾದರೆ ಅದು ಉತ್ತಮವೂ ಸುಲಭವೂ ಆಗಿದೆಯೆಂದು ಅವರು ಭಾವಿಸಿದರು. ಅವರ ಉದ್ದೇಶವು ಉತ್ತಮವಾಗಿತ್ತು ಮತ್ತು ತೂತು ಕೊರೆಯುವುದಕ್ಕೆ ಅವರು ನೀಡಿದ ಕಾರಣವೂ ಸರಿಯಾಗಿತ್ತು. ಆದರೆ ಅವರು ಮಾಡುವ ಕೃತ್ಯವು ಮಾತ್ರ ಪ್ರಮಾದವಾಗಿತ್ತು. ಅವರ ನಿಯ್ಯತ್ ಉತ್ತಮವಾಗಿದೆ ಎಂಬ ಕಾರಣದಿಂದ ಆ ಕೃತ್ಯವನ್ನು ಅನುಮೋದಿಸಲು ಸಾಧ್ಯವಿಲ್ಲ. ಅವರ ನಿಯ್ಯತ್ ಉತ್ತಮವಾಗಿದೆ ಎಂಬ ಕಾರಣದಿಂದ ಆ ಕೃತ್ಯವನ್ನು ಮಾಡಲು ಅವರನ್ನು ಬಿಟ್ಟು ಬಿಟ್ಟರೆ ಹಡಗಿನಲ್ಲಿರುವ ಎಲ್ಲರೂ ನಾಶವಾಗುವರು.

ಉದ್ದೇಶವು ಉತ್ತಮವಾಗಿದೆ ಎಂಬ ಕಾರಣದಿಂದ ಕೆಡುಕು ಒಳಿತಾಗಿ ಮಾರ್ಪಡು ವುದಿಲ್ಲ. ಇದು ನಾವು ವಿಶೇಷವಾಗಿ ಗಮನ ಹರಿಸಬೇಕಾದ ಸಂಗತಿಯಾಗಿದೆ. ಇದಕ್ಕಿರುವ ಕೆಲವು ಉದಾಹರಣೆಗಳನ್ನು ನೋಡಿ:

ಹುನೈನ್ ಯುದ್ಧದ ಸಂದರ್ಭದಲ್ಲಿ ಪ್ರವಾದಿ(ﷺ)ರವರು ಮತ್ತು ಸಹಾಬಾಗಳು ದಾತ್ ಅನ್ವಾತ್ ಎಂಬ ಹೆಸರಿನ ಒಂದು ಮರದ ಬಳಿಯಿಂದ ಹಾದು ಹೋಗುತ್ತಿದ್ದರು. ದಾತ್ ಅನ್ವಾತ್ ಎಂದರೆ ಮುಶ್ರಿಕರು ಬರಕತ್ ಪಡೆಯುವುದಕ್ಕಾಗಿ ಇಅ್‌ತಿಕಾಫ್

ಕೂರುತ್ತಿದ್ದ ಮತ್ತು ತಮ್ಮ ಶಸ್ತ್ರಗಳನ್ನು ಬರಕತ್‌ಗಾಗಿ ತೂಗಿಸುತ್ತಿದ್ದ ಒಂದು ಮರವಾಗಿತ್ತು. ಆ ಮರವನ್ನು ಸ್ಪರ್ಶಿಸಿದರೆ ಮತ್ತು ಅದರಲ್ಲಿ ಶಸ್ತ್ರಗಳನ್ನು ತೂಗಿಸಿದರೆ ಯುದ್ಧದಲ್ಲಿ ಗೆಲುವು ಲಭ್ಯವಾಗುತ್ತದೆ ಎಂಬ ನಂಬಿಕೆಯು ಮುಶ್ರಿಕರಿಗಿತ್ತು.

ಈ ಮರದ ಬಳಿಯಿಂದ ಹಾದು ಹೋಗುವಾಗ ಸಹಾಬಾಗಳು ಹೇಳಿದರು:

اجْعَلْ لَنَا ذَاتَ أَنْوَاطٍ كَمَا لَهُمْ ذَاتُ أَنْوَاطٍ

**“ಅವರಿಗೆ (ಮುಶ್ರಿಕರಿಗೆ) ಒಂದು ದಾತ್ ಅನ್ವಾತ್ ಇರುವಂತೆ ನಮಗೂ ಒಂದು ದಾತ್ ಅನ್ವಾತನ್ನು ಮಾಡಿಕೊಡಿರಿ.”**

ಸಹಾಬಾಗಳು ಉತ್ತಮ ಉದ್ದೇಶದಿಂದ ಇದನ್ನು ಹೇಳಿದ್ದರು. ಮುಶ್ರಿಕರು ಶಸ್ತ್ರವನ್ನು ತೂಗಿಸಿ ಬರಕತ್ ಪಡೆಯುವಂತೆ ನಮಗೂ ಬರಕತ್ ಪಡೆಯಲು ಮತ್ತು ಯುದ್ಧದಲ್ಲಿ ಜಯಗಳಿಸಲು ಒಂದು ದಾತ್ ಅನ್ವಾತನ್ನು ಮಾಡಿಕೊಡಿರಿ ಎಂಬುದು ಅವರ ಮಾತಿನ ತಾತ್ಪರ್ಯವಾಗಿತ್ತು.

ಆದರೆ ಅವರ ಉದ್ದೇಶವು ಉತ್ತಮವಾಗಿದೆಯೆಂಬುದನ್ನು ಪ್ರವಾದಿ(ﷺ)ರವರು ಪರಿಗಣಿಸಲಿಲ್ಲ. ಬದಲಾಗಿ ಇಂತಹ ಒಂದು ಮಾತನ್ನು ಹೇಳುವುದನ್ನು ವಿರೋಧಿಸುತ್ತಾ ಅವರು ಹೇಳಿದರು:

« قُلْتُمْ وَالَّذِي نَفْسِي بِيَدِهِ كَمَا قَالَتْ بَنُو إِسْرَائِيلَ لِمُوسَى اجْعَلْ لَنَا إِلَهًا كَمَا لَهُمْ آلِهَةٌ »

**“ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಅವನ ಮೇಲಾಣೆ, ‘ಅವರಿಗೆ (ಮುಶ್ರಿಕರಿಗೆ) ಆರಾಧ್ಯರಿರುವಂತೆ ನಮಗೂ ಒಂದು ಆರಾಧ್ಯವನ್ನು ಮಾಡಿಕೊಡಿರಿ’ ಎಂದು ಬನೂ ಇಸ್ರಾಈಲರು ಮೂಸಾರೊಂದಿಗೆ ಹೇಳಿದಂತೆ ನೀವು ನನ್ನೊಂದಿಗೆ ಹೇಳಿರುವಿರಿ.” [ಅತ್ತಿರ್ಮಿದಿ; ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ]**

ಇನ್ನೊಂದು ಉದಾಹರಣೆ ನೋಡಿರಿ:

ಒಮ್ಮೆ ಇಬ್ನ್ ಉಮರ್(ﷺ)ರವರ ಬಳಿ ಒಬ್ಬ ವ್ಯಕ್ತಿ ಸೀನಿದರು. ಸೀನಿದ ನಂತರ ಆ ವ್ಯಕ್ತಿ ‘ಅಲ್‌ಹಮ್ದುಲಿಲ್ಲಾಹ್ ವಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹ್’ ಎಂದು ಹೇಳಿದರು. ಸೀನಿದ ನಂತರ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳುವುದರ ಜೊತೆಗೆ ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳುವ ಆ ವ್ಯಕ್ತಿಯ ಉದ್ದೇಶವು ಉತ್ತಮವಾಗಿತ್ತು. ಇಬ್ನ್ ಉಮರ್(ﷺ)ರವರು ಆ ವ್ಯಕ್ತಿಯೊಂದಿಗೆ ಇದರ ಬಗ್ಗೆ ವಿಚಾರಿಸಿದಾಗ ‘ನಾನು ಯಾವಾಗಲೂ ಇದೇ ರೀತಿ ಹೇಳುತ್ತಿರುವೆನೆಂದು ಆ ವ್ಯಕ್ತಿ ಹೇಳಿದರು.’ ಆ ವ್ಯಕ್ತಿಯ ಉದ್ದೇಶವು ಉತ್ತಮವಾಗಿತ್ತು ಮತ್ತು ಆ ವ್ಯಕ್ತಿ ಹೇಳಿದ

ವಾಕ್ಯವೂ ಉತ್ತಮವಾಗಿತ್ತು. ಆದರೆ ಇಬ್ನ್ ಉಮರ್(ﷺ)ರವರು ಸುಮ್ಮನಾಗಲಿಲ್ಲ. ಅವರು ಹೇಳಿದರು:

لَكِنْ مَا هَكَذَا عَلَّمَنَا رَسُولُ اللَّهِ ﷺ بَلْ قَالَ: «إِذَا عَطِسَ أَحَدُكُمْ فَلْيَحْمَدِ اللَّهَ». وَلَمْ يَقُلْ فَلْيُصَلِّ عَلَى رَسُولِ اللَّهِ.

**"ಆದರೆ ರಸೂಲುಲ್ಲಾಹಿ(ﷺ)ರವರು ನಮಗೆ ಈ ರೀತಿಯಾಗಿ ಕಲಿಸಿಕೊಟ್ಟಿಲ್ಲ. ಬದಲಾಗಿ ಅವರು ಕಲಿಸಿಕೊಟ್ಟದ್ದು ಈ ರೀತಿಯಾಗಿದೆ: 'ನಿಮ್ಮಲ್ಲಿ ಯಾರಾದರೂ ಸೀನಿದರೆ ಅವನು ಅಲ್ಲಾಹನನ್ನು ಸ್ತುತಿಸಲಿ.' ಅವನು ರಸೂಲುಲ್ಲಾಹಿ(ﷺ)ರವರ ಮೇಲೆ ಸಲಾತ್ ಹೇಳಲಿ ಎಂದು ಅವರು ಕಲಿಸಿಕೊಟ್ಟಿಲ್ಲ." [ಅತ್ತಿರ್ಮಿದಿ ಮತ್ತು ಅಲ್‌ಹಾಕಿಮ್]**

ಇದು ಬಿದ್‌ಅತ್ತಿನ ಜನರನ್ನು ವಿರೋಧಿಸುವ ವಿಷಯದಲ್ಲಿರುವ ಅಹ್ಲುಸ್ಸುನ್ನತ್ತಿನ ಒಂದು ಪ್ರಮುಖ ತತ್ವವಾಗಿದೆ. ಉದ್ದೇಶವು ಉತ್ತಮವಾಗಿದೆ ಅಥವಾ ಹೇಳುವ ವಾಕ್ಯವು ಅಥವಾ ಮಾಡುವ ಕರ್ಮವು ಉತ್ತಮವಾಗಿದೆ ಎಂಬುದು ಬಿದ್‌ಅತ್‌ಗಳನ್ನು ಸುನ್ನತ್‌ಗಳಾಗಿ ಮಾರ್ಪಡಿಸುವುದಿಲ್ಲ. ಆದರೆ ಜನರಲ್ಲಿ ಹೆಚ್ಚಿನವರೂ ಈ ತತ್ವವನ್ನು ಮರೆತುಬಿಡುತ್ತಾರೆ. ಅವರು ಹೇಳುತ್ತಾರೆ: "ಒಬ್ಬ ವ್ಯಕ್ತಿ ಗೋರಿಗೆ ತವಾಫ್ ಮಾಡುವುದನ್ನು ಅಥವಾ ಗೋರಿಗೆ ಸುಜೂದ್ ಮಾಡುವುದನ್ನು ಕಂಡರೆ ಅದನ್ನು ವಿರೋಧಿಸಬಾರದು. ಯಾಕೆಂದರೆ ಅವನ ನಿಯ್ಯತ್ ಉತ್ತಮವಾಗಿದ್ದರೆ ಅವನಿಗೆ ವಿನಾಯಿತಿಯಿದೆ." ಆದರೆ ವಾಸ್ತವವಾಗಿ ಇಂತಹ ಕೃತ್ಯಗಳನ್ನು ಮಾಡುವವರನ್ನು ತಡೆಯಬೇಕಾದುದು ಅತ್ಯಾವಶ್ಯಕವಾಗಿದೆ, ಮಾತ್ರವಲ್ಲ ಕಡ್ಡಾಯವೂ ಆಗಿದೆ.

ಒಬ್ಬ ವ್ಯಕ್ತಿ ಕಿಬ್ಲಃ ಅಲ್ಲದ ದಿಕ್ಕಿಗೆ ನಮಾಝ್ ಮಾಡುವುದನ್ನು ಕಂಡರೆ, ಅಥವಾ ಒಬ್ಬ ವ್ಯಕ್ತಿ ಶೌಚಾಲಯಕ್ಕೆ ಹೋಗಿ ನಂತರ ವುದೂ ಮಾಡದೆ ನೇರವಾಗಿ ನಮಾಝ್‌ಗೆ ಕೈಕಟ್ಟುವುದನ್ನು ಕಂಡರೆ, ಅವನ ಉದ್ದೇಶವು ಉತ್ತಮವಾಗಿರಬಹುದು ಎಂದು ಹೇಳಿ ಸುಮ್ಮನಾಗಲು ಸಾಧ್ಯವೇ? ಇಲ್ಲ, ಬದಲಾಗಿ ಆತನಿಗೆ ಆತನ ಪ್ರಮಾದವನ್ನು ತೋರಿಸಿಕೊಟ್ಟು ಶಿಕ್ಷಣವನ್ನು ನೀಡಬೇಕಾದುದು ನಮ್ಮ ಕರ್ತವ್ಯವಾಗಿದೆ.

ಬಿದ್‌ಅತ್ ಮಾಡುವ ಅನೇಕ ಜನರು, ತಾವು ಇದನ್ನು ಮಾಡುವುದು ಧರ್ಮದಲ್ಲಿ ಹೊಸ ಆಚಾರವನ್ನು ಸೃಷ್ಟಿಸುವುದಕ್ಕಲ್ಲ; ಬದಲಾಗಿ ನಾವು ಇದನ್ನು ಮಾಡುತ್ತಿರುವುದು ಉತ್ತಮವಾದ ಉದ್ದೇಶದಿಂದಾಗಿದೆ; ಆದ್ದರಿಂದ ನಮ್ಮ ನಿಯ್ಯತ್‌ನ ಪ್ರಕಾರ ನಮಗೆ ಪ್ರತಿಫಲ ಸಿಗುತ್ತದೆ ಎನ್ನುತ್ತಾರೆ.

ಇವರ ಮಾತನ್ನು ಒಪ್ಪಿಕೊಳ್ಳುವುದಾದರೆ ಧರ್ಮವು ಧರ್ಮವಾಗಿ ಉಳಿಯಲಾರದು. ಜನರೆಲ್ಲರೂ ಪಥಭ್ರಷ್ಟರಾಗುವರು. ಆದ್ದರಿಂದ ನಿಯ್ಯತ್ ಉತ್ತಮವಾಗಿದೆ ಎಂಬುದು ಮಾತ್ರ ಯಾವುದೇ ಪ್ರಯೋಜನವನ್ನೂ ನೀಡುವುದಿಲ್ಲ. ಬದಲಾಗಿ ನಿಯ್ಯತ್‌ನೊಂದಿಗೆ

ಕರ್ಮವು ಕೂಡ ಸರಿಯಾಗಿರಬೇಕಾಗಿದೆ. ಅಂದರೆ ಪ್ರವಾದಿ(ﷺ)ರವರ ಸುನ್ನತ್ತಿನ ಆಧಾರದಲ್ಲಿರಬೇಕಾಗಿದೆ. ಧರ್ಮದ ವಿಷಯದಲ್ಲಿ ಜನರು ತಮ್ಮ ಸ್ವಂತ ಅಭಿಪ್ರಾಯದ ಪ್ರಕಾರ ಚಲಿಸಲು ಅನುಮತಿಯಿಲ್ಲ. ಕರ್ಮವೊಂದು ಸ್ವೀಕಾರವಾಗಬೇಕಾದರೆ ನಿಯ್ಯತ್ ಎಷ್ಟು ಆವಶ್ಯಕವೋ ಅಷ್ಟೇ ಪ್ರವಾದಿಚರ್ಯೆಯ ಅನುಸರಣೆ ಕೂಡ ಆವಶ್ಯಕವಾಗಿದೆ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أجْمَعِين .

*********